# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## -:ವಾರ್ಡ್-42ರ ವಾರ್ಡ್ ಸಮಿತಿ ಸಭೆಯ ನಡವಳಿಗಳು:-

ದಿನಾಂಕ: 05.12.2020 ರಂದು ಪೂರ್ವಾಹ್ನ 09.30 ಗಂಟೆಗೆ ವಾರ್ಡ್ ನಂ.42 ಲಕ್ಷ್ಮೀದೇವಿನಗರ, ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ನಂ.42ರ ವಾರ್ಡ್ ಕಛೇರಿಯಲ್ಲಿ ನೋಡಲ್ ಅಧಿಕಾರಿಗಳಾದ ಡಾ|| ಎಂ. ಜಿ. ಹಳ್ಳಿ ಶಿವರಾಮಂ, ರವರ ಅಧ್ಯಕ್ಷತೆಯಲ್ಲಿ ನಡೆಸಲಾಗಿದ್ದು, ಸದರಿ ಸಭೆಯ ಸಭಾ ನಡವಳಿಗಳು

**ಸಭೆಗೆ ಹಾಜರಿದ್ದ ಅಧಿಕಾರಿಗಳು:**

1. ಡಾ|| ಎಂ. ಜಿ. ಹಳ್ಳಿ ಶಿವರಾಮಂ, ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು
2. ಸುಮಂತ್ ಗೌಡ ಸಿ. ಎಸ್., ಸಹಾಯಕ ಅಭಿಯಂತರರು, ವಾರ್ಡ್ ನಂ.42 ಹಾಗೂ ಸದಸ್ಯ ಕಾರ್ಯದರ್ಶಿ
3. ನಿಮ ಲ.ಕೆ.ಕಂದಾಯ ವಸೂಲಿಗಾರರು
4. ಎನ್.ನರಸಿಂಹಯ್ಯ.ಕಂದಾಯ ಪರಿವೀಕ್ಷಕರು
5. ಭರತ್.ವಿ.ಸ.ಅ.ವಿದ್ಯುತ್
6. ಡಾ||ಸರಿತ ರಾವ್, ಸರ್ಕಾರಿ ಆಸ್ಪತ್ರೆ,
7. ಸಂತೋಷ್ ಕುಮಾರ್, ಸ.ಅ., ಬೆಸ್ಕಾಂ
8. ಶ್ರೀನಿವಾಸ, ಜನಾವಾರು ಅಧಿಕಾರಿ, ಪಶು ಸಂಗೋಪಾನ ಇಲಾಖೆ.
9. ನಾರಾಯಣಸ್ವಾಮಿ, ಮೇಲ್ವಿಚಾರಕರು
10. ದೇವರಾಜ್, ಮೇಲ್ವಿಚಾರಕರು
11. ದೀಪಕ್, ಬಿ.ಡಬ್ಲ್ಯೂ.ಎಸ್.ಎಸ್.ಬಿ
12. ಮುತ್ಯಾಲಪ್ಪ ವಾರ್ಡ್ ಮೇಲ್ವಿಚಾರಕರು
13. ಗಗನ್ ಟಿ. ಕೆ. ಮಾರ್ಷಲ್.

**ಸಭೆಗೆ ಗೈರು ಹಾಜರಿದ್ದ ಅಧಿಕಾರಿಗಳು**

1. ಆರಕ್ಷಕರ ನಿರೀಕ್ಷಕರು ನಂದಿನಿ ಬಡಾವಣೆ ಮತ್ತು ಆರ್.ಎಂ.ಸಿ.ಯಾರ್ಡ್ ಪೋಲಿಸ್ ಠಾಣೆ.
2. ಹಿರಿಯ/ಕಿರಿಯ ಆರೋಗ್ಯ ಪರಿವೀಕ್ಷಕರು (ಎಸ್.ಡಬ್ಲ್ಯೂಎಂ)
3. ತೋಟಗಾರಿಕೆ ಇಲಾಖೆ
4. ಅರಣ್ಯಾ ಇಲಾಖೆ
5. ಸಹಾಯ/ ಕಿರಿಯ ಅಭಿಯಂತರರು, ಬೆಸ್ಕಾಂ ಪೀಣ್ಯಾ ವಾರ್ಡ್ ನಂ.42.
6. ಸಹಾಯ/ಕಿರಿಯ ಅಭಿಯಂತರರು ಬೆಸ್ಕಾಂ.ನಂದಿನಿ ಬಡಾವಣೆ, ವಾ.42

ವಾರ್ಡ್-42ರ ವಾರ್ಡ್ ಸಮಿತಿ ಸಭೆಗೆ ಹಾಜರಿದ್ದ ಎಲ್ಲಾ ಸದಸ್ಯರು ಮತ್ತು ಅಧಿಕಾರಿ ವರ್ಗದವರಿಗೆ ಕಾರ್ಯದರ್ಶಿಯವರು ಸ್ವಾಗತಿಸಿ ವಾರ್ಡ್ ಸಮಿತಿ ಸಭೆಯ ಮಾರ್ಗಸೂಚಿಗಳನ್ನು ಸಭೆಗೆ ಸ್ಥೂಲವಾಗಿ ವಿವರಿಸಿದರು.

Scanned by CamScanner

ಮಾನ್ಯ ಅಧ್ಯಕ್ಷರು, ಸಭೆಯ ಸದಸ್ಯರುಗಳನ್ನು ಪರಸ್ಪರ ಪರಿಚಯ ಮಾಡಿಸಿ, ಮಾರ್ಗಸೂಚಿಯಂತೆ, ಈ ಕೆಳಗಿನ ವಿಷಯಗಳನ್ನು ಸಭೆಯ ಮುಂದಿಟ್ಟು ವಾರ್ಡ್ ಸಮಿತಿ ಸಭೆಯು ನಿರ್ವಹಿಸಬೇಕಾದ ಅಂಶಗಳನ್ನು ತಿಳಿಸಿ, ಅನುಸರಿಸಬೇಕಾದ ಕ್ರಮಗಳನ್ನು ಈ ಕೆಳಕಂಡಂತೆ ಕ್ರಮವಹಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ವಾರ್ಡ್ ವ್ಯಾಪ್ತಿಯಲ್ಲಿ ಸಂಗ್ರಹವಾಗುವ ಘನತ್ಯಾಜ್ಯಗಳನ್ನು ಹಸಿ ಕಸ ಹಾಗೂ ಒಣ ಕಸವನ್ನು ಕಡ್ಡಾಯವಾಗಿ ಪ್ರತ್ಯೇಕವಾಗಿ ಸಂಗ್ರಹಿಸಬೇಕೆಂದು ಸೂಚಿಸಲಾಯಿತು. ಪ್ರತ್ಯೇಕವಾಗಿ ಬ್ಲಾಕ್ ಗಳನ್ನು ವಿಂಗಡಿಸಿ ಕಸವನ್ನು ಸಂಗ್ರಹಿಸಿ ವಿಲೇ ಮಾಡಲು ಸೂಚಿಸಿದರು. ಹಾಗೂ ಕಸದ ಬಗ್ಗೆ ಸಾರ್ವಜನಿಕರಿಗೆ ಪ್ರಚಾರ ಮಾಡುವ ಜೊತೆಗೆ ಕೋವಿಡ್-19 ಬಗ್ಗೆ ಸಾರ್ವಜನಿಕರಿಗೆ ಮನವರಿಕೆ ಮಾಡಲು ಸೂಚಿಸಿ ವಾರ್ಡಿನಲ್ಲಿರುವ ಎಲ್ಲಾ ಬ್ಲಾಕ್ ಸ್ಪಾಟ್‌ಗಳನ್ನು ಮುಕ್ತಗೊಳಿಸಿ ಸೌಂರ್ಧಯಿಕರಣಗೊಳಿಸುವಂತೆ ಸೂಚಿಸಲಾಯಿತು.

**ಕ್ರಮ: ಘನತ್ಯಾಜ್ಯ ವಿಭಾಗದ ಅಧಿಕಾರಿಗಳಿಗೆ ಸೂಚಿಸಲಾಯಿತು.**

ಕಡ್ಡಾಯವಾಗಿ ಮಾಸ್ಕ್ ಧರಿಸುವಂತೆ ಮತ್ತು ಬ್ಲಾಕ್‌ವಾರು ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳುವಂತೆ ಜನಜಾಗೃತಿ ಮೂಡಿಸಲು ಧ್ವನಿವರ್ಧಕವಿರುವ ಆಟೋಗಳಲ್ಲಿ ಸಾಯಂಕಾಲ 5 ರಿಂದ 7 ಗಂಟೆಯವರೆಗೆ ಜನ ನಿಬಿಡ ಪ್ರದೇಶಗಳಲ್ಲಿ ಪ್ರಚಾರ ಮಾಡಲು ವ್ಯವಸ್ಥೆ ಮಾಡುವಂತೆ ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ತಿಳಿಸಲಾಯಿತು. ಈ ಹಿಂದಿನ ಸಭೆಯ ನಡವಳಿಯಂತೆ ಬ್ಲಾಕ್ ವಾರು ಪ್ರತಿ ರಸ್ತೆಯ ಪ್ರತಿ ಮನೆಗಳಿಗೆ ಭೇಟಿ ನೀಡಿ ಪ್ರತಿಯೊಬ್ಬರಿಗೂ ಉಚಿತವಾಗಿ ಕೋವಿಡ್-19 ಪರೀಕ್ಷೆ ಮಾಡಿಸಿರುವ ಕ್ರಮವನ್ನು ತಪ್ಪದೆ ಮುಂದುವರೆಸುವಂತೆ ಸೂಚಿಸಲಾಯಿತು.

ಸಾರ್ವಜನಿಕರಿಗೆ ಯಾವುದೇ ರೀತಿ ತೊಂದರೆಯಾದರೂ ಖಾಸಗೀ ಆಸ್ಪತ್ರೆಗೆ ತೆರಳುವ ಮುನ್ನ ಕೊರೊನಾ ಸರ್ಟಿಫಿಕೇಟ್ ಕಡ್ಡಾಯ ಮಾಡಿರುವ ಬಗ್ಗೆ ಮತ್ತು ಡಿಸೆಂಬರ್, ಜನವರಿ ಮತ್ತು ಫೆಬ್ರವರಿ ತಿಂಗಳಲ್ಲಿ ಕೊರೊನಾ ಎರಡನೇ ಅಲೆ ತೀವ್ರವಾಗುದುದೆಂಬ ತಜ್ಞರ ವರದಿ ಬಗ್ಗೆ ಮನವರಿಕೆ ಮಾಡಿ ಸಾಮಾಜಿಕ ಅಂತರ, ಸ್ಯಾನಿಟೇಜರೇಷನ್ ಮತ್ತು ಮಾಸ್ಕ ಧರಿಸುವಿಕೆಯನ್ನು ಕಡ್ಡಾಯವಾಗಿ ಪಾಲಿಸುವಂತೆ ಮನವರಿಕೆ ಮಾಡಬೇಕೆಂದು ಸಭೆಯಲ್ಲಿ ಸೂಚಿಸಲಾಯಿತು.

**ಕ್ರಮ: ಸರ್ಕಾರಿ ಆರೋಗ್ಯ ಕೇಂದ್ರ ವಾರ್ಡ್ ನಂ.42**

ಸದಸ್ಯರಾದ ಆನಂದ್, ಕವಿತಾ ಮತ್ತು ಅಮ್ಮು ರವರು ಮಾತನಾಡಿ ವಾರ್ಡಿನಲ್ಲಿ ಸರ್ಕಾರಿ ಆಸ್ಪತ್ರೆ ರಸ್ತೆ, ಕೆಂಪಮ್ಮ ಬಡಾವಣೆ ಹಾಗೂ ಕಾವೇರಿ ನಗರ ರಸ್ತೆಯಲ್ಲಿ ಬೀದಿ ದೀಪಗಳ ಸಮಸ್ಯೆ ಪ್ರಸ್ತಾಪಿಸಲಾಗಿ ಸಮಸ್ಯೆ ಕಂಡುಬಂದಲ್ಲಿ ಎಲ್ಲಾ ಸದಸ್ಯರೂ ಬೀದಿ ದೀಪಗಳ ನಿರ್ವಹಣೆ ಗುತ್ತಿಗೆದಾರರಿಗೆ ತಿಳಿಸುವಂತೆ ಅವರ ದೂರವಾಣಿ ಸಂಖ್ಯೆಯನ್ನು ನೀಡಲಾಯಿತು, ಹಾಗೂ ಬೆಸ್ಕಾಂ ಅಧಿಕಾರಿಗಳಿಗೆ ತಕ್ಷಣ ಕ್ರಮ ವಹಿಸುವಂತೆ ಸೂಚಿಸಲಾಯಿತು.

**ಕ್ರಮ: ಸಹಾಯಕ ಅಭಿಯಂತರರು, (ವಿದ್ಯುತ್ ರಾ ರಾ ನಗರ ವಲಯ) ಮತ್ತು**

**ಬೀದಿದೀಪಗಳ ನಿರ್ವಹಣಾ ಗುತ್ತಿಗೆದಾರರು, ವಾರ್ಡ್ ನಂ.42**

Scanned by CamScanner

ವಾರ್ಡ್‌ನಲ್ಲಿ ಚುನಾವಣಾ ಗುರುತಿನ ಚೀಟಿಗಳು ಸಾರ್ವಜನಿಕರಿಗೆ ಇಲ್ಲದಿರುವ ಬಗ್ಗೆ ಹಾಗೂ ಸತ್ತವರ ಹೆಸರುಗಳು ತೆಗೆಯದಿರುವ ಬಗ್ಗೆ ಮತ್ತು ಹೊಸದಾಗಿ ಸೇರ್ಪಡೆಗೊಳಿಸಲು ಎಲ್ಲಾ ಸದಸ್ಯರುಗಳು ಅಧ್ಯಕ್ಷರಿಗೆ ಕೋರಲಾಗಿ ಈ ಸಂಬಂಧಪಟ್ಟ ಅಧಿಕಾರಿಗಳಾದ ಎನ್.ನರಸಿಂಹಯ್ಯ ಹಾಗೂ ನಿರ್ಮಲ.ಕೆ ರವರಿಗೆ ತಕ್ಷಣ ಸಂಬಂಧಪಟ್ಟ ಬಿಎಲ್‌ಓ.ಗಳನ್ನು ಕರೆಸಿ ಪ್ರತಿ ಬ್ಲಾಕ್‌ಗಳಿಗೆ ಪರಿಷ್ಕರಣೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳಲು ಸೂಚಿಸಿದೆ.

**ಕ್ರಮ: ಸಹಾಯಕ ಕಂದಾಯ ಅಧಿಕಾರಿ, ವಾರ್ಡ್ ನಂ.42**

ಡಾ॥ ಸರಿತ ರಾವ್ ರವರು ಮಾತನಾಡಿ ಸರ್ಕಾರಿ ಆಸ್ಪತ್ರೆ ಮುಂಭಾಗದಲ್ಲಿ ಚರಂಡಿ ನೀರು ಹಾಗೂ ಮಾಂಸದ ಅಂಗಡಿಯಿಂದ ಬರುವ ಕಲುಷಿತ ನೀರು ನಿಲ್ಲತ್ತಿದ್ದು, ಅದನ್ನು ಸರಿಪಡಿಸಲು ಹಾಗೂ ಆಸ್ಪತ್ರೆಗೆ ಸ್ವಚ್ಛ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕೆಂದು ಹಾಗೂ ಸಾರ್ವಜನಿಕರಿಗೆ ಶೌಚಾಲಯದ ವ್ಯವಸ್ಥೆ ಬಗ್ಗೆ ಕೋರಿದರು.

ಸರ್ಕಾರದಿಂದ ಅನುಮೋದನೆಗೊಂಡಿರುವ My City My Budget in partnership with janaagraha ಕಾಮಗಾರಿಗಳಡಿ ಸಾರ್ವಜನಿಕ ಶೌಚಾಲಯ ಮತ್ತು ಪಾದಚಾರಿ ರಸ್ತೆಗಳ ಬೇಡಿಕೆಗಳನ್ನು ಕ್ರೂಡಿಕರಿಸಿ ಮುಂದಿನ ಸಭೆಯಲ್ಲಿ ಪ್ರಸ್ತಾವನೆ ಸಲ್ಲಿಸುವಂತೆ ಸೂಚಿಸಿದರು.

**ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು ಗೊರಗುಂಟೆಪಾಳ್ಯ ವಾರ್ಡ್ ನಂ.42**

ಮೇಲ್ಕಂಡ ಸಮಸ್ಯೆಗಳ ಬಗ್ಗೆ ಸುಧೀರ್ಘವಾಗಿ ಚರ್ಚಿಸಿ, ಕಾರ್ಯದರ್ಶಿಯವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಸುಮಂತ್ ಗೌಡ ಸಿ. ಎಸ್.)
ಸಹಾಯಕ ಅಭಿಯಂತರರು ಹಾಗೂ
ಸದಸ್ಯ ಕಾರ್ಯದರ್ಶಿ
ವಾರ್ಡ್ ಸಂಖ್ಯೆ:42

(ಡಾ॥ ಎಂ. ಜಿ. ಹಳ್ಳಿ ಶಿವರಾಮ್)
ವಾರ್ಡ್ ನೋಡಲ್ ಅಧಿಕಾರಿ
ವಾರ್ಡ್ ಸಂಖ್ಯೆ:42

Scanned by CamScanner